# ನೀ ಹೊರಟಿದ್ದೀಗ ಎಲ್ಲಿಗೆ?

■ ವಿನಯಾ ಒಕ್ಕುಂದ
ಕಲೆ: ರೂಪಶ್ರೀ ಕಲ್ಲಿಗನೂರು

‘ನಿಂಬೀಹಣ್ಣರೀ ನಿಂಬೀss ಹಣ್ಣೂss’ ದಿಗಂತದ ಅಂಚಿನಿಂದ ಎದ್ದು ಬಂದ ಹಾಗಿನ ಕರೆ. ಓಣಿ ರವಿವಾರದ ಮಧ್ಯಾಹ್ನದ ಸುಖನಿದ್ದೆಯಲ್ಲಿ ಓಲಾಡುತ್ತ, ನಗರದ ಹೊಟ್ಟೆಯೊಳಗಿದ್ದೂ ಶಾಂತವಾಗಿ ಕಾವು ಕೂತಿತ್ತು. ಅದೇ ಆಗ ಊಟ ಮುಗಿಸಿ ತಾಟು ತಂದು ಅಡುಗೆ ಮನೆ ಸಿಂಕ್‌ನಲ್ಲಿ ದಬಕ್ಕನೆ ಕವುಚಿ ಹೋದ ಮಗನತ್ತ ಒಂದು ಬೇಸೂರು ನೋಟ ಚೆಲ್ಲಿ ತಾಟು ಎತ್ತಿಡಲು, ಸಿಂಕ್ ಮತ್ತೆ ತೊಳೆಯಲು ಹೋಗಿದ್ದಳು ಇಂದಿರೆ.

‘ನನ್ನ ಮಗ ಮಾತ್ರ ಹೀಗೋ, ಲೋಕದ ಮಕ್ಕಳೆಲ್ಲ ಹೀಗೆಯೋ? ನನ್ನ ಗಂಡ, ಹೆಂಡತಿಮಕ್ಕಳು ಅಂದರೆ ಪೂರಾ ಅಚ್ಚೆ ಮಾಡುವವನಾದ್ದರಿಂದ ಮಗ ಹೀಗೆ ಸಡಿಲವಾದನೇ? ಅಥವಾ ಒಬ್ಬನೇ ಮಗನೆಂದು ನಾನು ತೋರಿದ ಅತಿಪ್ರೀತಿಯ ಫಲಿತವೇ ಇದು? ಇದೇ ವಿಷಯಕ್ಕೆ ಗಂಡಹೆಂಡತಿ ಅದೆಷ್ಟು ಸಾವಿರ ಸಲ ಕಿತ್ತಾಡಿಲ್ಲ? ಇದೆಂಥದಿದು? ಎಲ್ಲರ ಜೊತೆ ಉಣ್ಣಲೂ ಆಗದೇ, ಎಲ್ಲರೆಂದರೆ... ಇರುವವರೇ ಮೂವರು. ತಾನೊಬ್ಬನೇ ತಾಟು ತಗೊಂಡು ತನ್ನ ರೂಮಿಗೆ ಹೋಗಿ ಕೂಡುತ್ತಾನೆ. ಮೊಬೈಲು, ಲ್ಯಾಪ್‌ಟಾಪ್ ಎರಡಿದ್ದರೆ ನರಕವೂ ಸ್ವರ್ಗವೇ.’ ಮಗನ ಮೇಲೆ ಆರೋಪ ಪಟ್ಟಿ ಸಿದ್ಧ ಮಾಡುವ ಇರಾದೆಯೇನೂ ಅವಳಿಗಿಲ್ಲ. ಆದರೆ... ಬದುಕಬೇಕು, ಮನಸ್ಸು ತುಂಬಿ ಬದುಕಬೇಕು ಎಂಬ ಆಸೆಯನ್ನು ಭರಣಿ ಮುಚ್ಚಳ ಬಿಗಿದ ಹಾಗೆ ಬಿಗಿದಿಡಬೇಕಲ್ಲ... ಗಂಟಲು ಕಟ್ಟಿದ ಹಾಗಾಗುತ್ತದೆ.

ಈಗೀಗ ಸಣ್ಣ ಸಣ್ಣ ಸಂಗತಿಗಳಿಗೂ ಕಣ್ಣು ಬಸಿಯತೊಡಗುತ್ತದೆ. ಗಾಬರಿಬೀಳುತ್ತಾಳೆ ಇಂದಿರೆ. ಹೀಗಾಗುತ್ತ ಆಗುತ್ತ ದೇಹವೂ ನರಳುತ್ತ ನರದೌರ್ಬಲ್ಯವೋ ಮತ್ತೆಂತದೋ ಆಗಿ, ಮೈಮೇಲಿನ ಇರುಬರುವಿಕೆಯೂ ಸ್ವಯ ತಪ್ಪಿ... ‘ಅಯ್ಯೋ ದೇವರೆ, ಗುಡಿಯಮ್ಮ ನಂಗೆ ಚೆಂದದ ಸಾವು ಕೊಡು. ಹೀಗೆ ನಿಂತಲ್ಲಿಂದಲೇ ನಿನ್ನ ಪಾದಗಟ್ಟಿ ಮುಟ್ಟೋ ಶಕ್ತಿ ಕೊಡು’ ಇಂದಿರೆಗೆ ನಗು, ನಗು. ಕರುಳು ಹರಿದು ಕೊರೆದ ತಣ್ಣನೆಯ ನಗು. ಅಜ್ಜಿ ತುಳಸಿಗೆ ದೀಪಹಚ್ಚಿ ಬೇಡಿಕೊಳ್ಳುವ ಅದೇ ಪ್ರಾರ್ಥನೆಯನ್ನು ತಾನೀಗ ಸಿಂಕ್ ತೊಳೆಯುತ್ತ ಅಡುಗೆ ಮಾಡುತ್ತ ಮಾಡುತ್ತಿದ್ದೇನೆಯೇ? ಇನ್ನೇನು ಚೂರು ಅಡ್ಡಾಗಬೇಕು ಅಂತಿದ್ದಾಗ ಮತ್ತದೇ ದನಿ. ‘ನಿಂಬೀಹಣ್ಣರೀss ನಿಂಬೀಹಣ್ಣೂss...’ ಈಗ ಇಲ್ಲೇ ಎರಡು ಮನೆ ದಾಟಿದ ತಡವಿನಲ್ಲಿ. ಪುಟ್ಟ ಮಗುವಿನ ಹಾಗೆ ಬಾಲ್ಕನಿಗೆ ಓಡಿದಳು ಇಂದಿರೆ. ಅವಳು ಬಂದಳೇ? ಬಂದಾಳೇ? ಅವಳೆಲ್ಲಿ? ಎಂದು ಇವಳನ್ನು ಕೇಳಿದರೆ...

ಈ ನಿಂಬೀಹಣ್ಣಿನ ಬುಟ್ಟಿ ಹೊತ್ತವಳು ಎಳೆಯ ಹೆಂಗಸು. ಸೊಂಟಕ್ಕೆ ಅಡ್ಡಕಟ್ಟಿದ ಜೋಳಿಗೆ.

